## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು: | ಶ್ರೀ ಎಸ್. ಎಲ್. ಭೋಜೇಗೌಡ, |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 1299 |
| ಉತ್ತರಿಸ ಬೇಕಾದ ದಿನಾಂಕ: | 18.03.2020 |
| ಉತ್ತರಿಸುವ ಸಚಿವರು | ಶ್ರೀ ವಿ.ಸೋಮಣ್ಣ, ವಸತಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ವಸತಿ ಯೋಜನೆಯಡಿ ಫಲಾನುಭವಿಗಳು ಮನೆಗಳನ್ನು ಪಡೆದುಕೊಳ್ಳಲು ಇರುವ ಸರ್ಕಾರದ ಯೋಜನೆಗಳಾವುವು; (ಕ್ಷೇತ್ರವಾರು ವಿವರ ನೀಡುವುದು) | ರಾಜೀವ್ ಗಾಂಧಿ ವಸತಿ ನಿಗಮವು ರಾಜ್ಯದಲ್ಲಿ ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದಿರುವ ಎಲ್ಲಾ ಬಡತನ ರೇಖೆಗಿಂತ ಕೆಳಗಿರುವ ವಸತಿ ರಹಿತ ಕುಟುಂಬಗಳಿಗೆ ವಸತಿ ಸೌಕರ್ಯವನ್ನು ಒದಗಿಸಲು ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br>1. ಬಸವ ವಸತಿ ಯೋಜನೆ<br>2. ಡಾ॥ ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆ (ಗ್ರಾಮೀಣ ಹಾಗೂ ನಗರ)<br>3. ದೇವರಾಜು ಅರಸು ಯೋಜನೆ (ಗ್ರಾಮೀಣ ಹಾಗೂ ನಗರ)<br>4. ವಾಜಪೇಯಿ ನಗರ ವಸತಿ ಯೋಜನೆ (ರಾಜ್ಯ ಸರ್ಕಾರ ಪುರಸ್ಕೃತ)<br>5. ಪ್ರಧಾನ ಮಂತ್ರಿ ಆವಾಸ್ ಯೋಜನೆ (ಗ್ರಾಮೀಣ) (ಕೇಂದ್ರ ಸರ್ಕಾರ ಪುರಸ್ಕೃತ) |
| ಆ) | ಈ ಯೋಜನೆಗಳನ್ನು ಅರ್ಹ ಫಲಾನುಭವಿಗಳಿಗೆ ಮತ್ತು ಜನ ಸಾಮಾನ್ಯರಿಗೆ ತಲುಪಿಸಲು ಸರ್ಕಾರವು ಕ್ಷಿಪ್ರಗತಿಯಲ್ಲಿ ಕಾರ್ಯೋನ್ಮುಖವಾಗಿದೆಯೇ; ಹಾಗಿದ್ದಲ್ಲಿ, ಸದರಿ ಯೋಜನೆಗಳ ಲಾಭ ಪಡೆದುಕೊಂಡ ಫಲಾನುಭವಿಗಳೆಷ್ಟು; | ಹೌದು. ಇಲ್ಲಿಯವರೆಗೆ ಒಟ್ಟಾರೆ 42,37,591 ಫಲಾನುಭವಿಗಳು ಸದರಿ ಯೋಜನೆಗಳಡಿ ಲಾಭ ಪಡೆದುಕೊಂಡಿರುತ್ತಾರೆ. ಯೋಜನಾವಾರು ವಿವರ ಈ ಕೆಳಕಂಡಂತಿವೆ. |

| ಕ್ರ. ಸಂ. | ಯೋಜನೆಗಳು | ನಿರ್ಮಿಸಿದ ಮನೆಗಳು |
|---|---|---|
| 1 | ಬಸವ ವಸತಿ ಯೋಜನೆ | 26,05,251 |
| 2 | ದೇವರಾಜು ಅರಸು ವಸತಿ ಯೋಜನೆ | 41,634 |
| 3 | ಡಾ.ಬಿ.ಆರ್ ಅಂಬೇಡ್ಕರ್ ನಿವಾಸ್ ಯೋಜನೆ | 1,94,433 |

<table>
<tr>
<td></td>
<td></td>
<td>
<table>
<tr><td>4</td><td>ಪ್ರಧಾನ ಮಂತ್ರಿ ಆವಾಸ್ ಯೋಜನೆ (ಗ್ರಾ)</td><td>11,64,943</td></tr>
<tr><td>5</td><td>ವಾಜಪೇಯಿ ನಗರ ವಸತಿ ಯೋಜನೆ</td><td>2,31,330</td></tr>
<tr><td colspan="2">ಒಟ್ಟು</td><td>42,37,591</td></tr>
</table>
</td>
</tr>
<tr>
<td>ಇ)</td>
<td>ವಸತಿ ಯೋಜನೆಯಡಿ ಬರುವ ಹಲವು ಯೋಜನೆಗಳು ಜನ ಸಾಮಾನ್ಯರ ಗಮನಕ್ಕೆ ತರುವಲ್ಲಿ ಸರ್ಕಾರವು ಕ್ರಮ ಕೈಗೊಂಡಿದೆಯೇ;</td>
<td>ಹೌದು. ವಸತಿ ಯೋಜನೆಗಳ ಕುರಿತು ಜನ ಸಾಮಾನ್ಯರಿಗೆ ಅರಿವು ಮೂಡಿಸಲು ಈ ಕೆಳಕಂಡಂತಹ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.<br>• ರಾಜ್ಯದ ಎಲ್ಲಾ ಜಿಲ್ಲಾಪಂಚಾಯತಿಗಳ ಮೂಲಕ ಜಿಲ್ಲೆಗಳಲ್ಲಿ, ತಾಲ್ಲೂಕುಗಳಲ್ಲಿ ಹಾಗೂ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ವಸತಿ ಯೋಜನೆಗಳ ಕುರಿತು ನಾಮ ಫಲಕವನ್ನು ಅಳವಡಿಸಲಾಗಿದೆ.<br>• ವಸತಿ ಯೋಜನೆಗಳ ಕುರಿತು ಪತ್ರಿಕೆ, ರೇಡಿಯೋ ಮತ್ತು ದೂರದರ್ಶನಗಳಲ್ಲಿ ಜಾಹಿರಾತನ್ನು ನೀಡಲಾಗುತ್ತಿದೆ.<br>• ಪ್ರತಿ ಗ್ರಾಮ ಪಂಚಾಯತಿಗಳಲ್ಲಿ ವಸತಿ ಯೋಜನೆಗಳ ಕುರಿತು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಬಿತ್ತಿ ಪತ್ರಗಳ ಮೂಲಕ ಹಾಗೂ ಗ್ರಾಮ ಸಭೆಯ ಮೂಲಕ ಮಾಹಿತಿಯನ್ನು ಜನಸಾಮಾನ್ಯರಿಗೆ ಅರಿವು ಮೂಡಿಸುತ್ತಿರುತ್ತಾರೆ.<br>• ಪ್ರಧಾನ ಮಂತ್ರಿ ಆವಾಸ್ ಯೋಜನೆ(ಗ್ರಾ) ಯಡಿ ಪ್ರಗತಿಯನ್ನು ಉತ್ತಮಗೊಳಿಸಲು ಕೇಂದ್ರ ಸರ್ಕಾರದಿಂದ ಒದಗಿಸಲಾದ ಆಡಳಿತಾತ್ಮಕ ವೆಚ್ಚದಲ್ಲಿ ಪ್ರತಿ ಗ್ರಾಮ ಪಂಚಾಯತಿಗೆ "ಆವಾಸ್ ಮಿತ್ರ" ಎಂಬ ಹೆಸರಿನ ಸ್ವಯಂಸೇವಕರ ಸೇವೆಯನ್ನು ಪಡೆಯಲಾಗಿರುತ್ತದೆ.<br>• ನಿಗಧಿತ ಅವಧಿಯಲ್ಲಿ ಮನೆ ನಿರ್ಮಾಣ ಕಾಮಗಾರಿಯನ್ನು ಪೂರ್ಣಗೊಳಿಸುವಲ್ಲಿ ಫಲಾನುಭವಿಗಳನ್ನು ಉತ್ತೇಜಿಸುವುದು. ನುರಿತ ಕಟ್ಟಡ ನಿರ್ಮಾಣ ಕಾರ್ಮಿಕರನ್ನು ಒದಗಿಸುವಲ್ಲಿ ಸ್ಪರ್ಧಾತ್ಮಕ ಬೆಲೆಯಲ್ಲಿ ಉತ್ತಮ ಗುಣಮಟ್ಟದ ಮನೆ ನಿರ್ಮಾಣ ಸಾಮಾಗ್ರಿಗಳನ್ನು ಒದಗಿಸುವಲ್ಲಿ ಸಹಕರಿಸುವುದು.</td>
</tr>
</table>

| | | |
|---|---|---|
| ಉ) | ವಸತಿ ಯೋಜನೆಗಳಲ್ಲಿ ದುರುಪಯೋಗ ಕಂಡುಬಂದಿದೆಯೇ; ಹಾಗಿದ್ದಲ್ಲಿ ಈ ಯೋಜನೆಗಳನ್ನು ದುರ್ಲಾಭ ಮಾಡಿಕೊಳ್ಳುತ್ತಿರುವವರ ವಿರುದ್ಧ ಸರ್ಕಾರವು ಕಠಿಣ ಕ್ರಮ ಕೈಗೊಂಡಿದೆಯೇ; ಹಾಗಿದ್ದಲ್ಲಿ, ಮುಂಬರುವ ದಿನಗಳಲ್ಲಿ ದುರ್ಲಾಭವನ್ನು ತಡೆಗಟ್ಟಲು ಸರ್ಕಾರವು ಕೈಗೊಳ್ಳಲಿರುವ ಕ್ರಮಗಳೇನು; | ರಾಜ್ಯದ ವಿವಿಧ ಕಡೆಗಳಲ್ಲಿ ಅಂದರೆ ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕು ಕಣಜನಹಳ್ಳಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ವಿವಿಧ ವಸತಿ ಯೋಜನೆಗಳಡಿ ಆಯ್ಕೆಯಾದ ಫಲಾನುಭವಿಗಳು ಮನೆಗಳನ್ನು ನಿರ್ಮಿಸದೇ ಹಣ ಪಡೆದಿರುವ ಬಗ್ಗೆ ಬಂದಂತಹ ದೂರಿನ ಹಿನ್ನೆಲೆಯಲ್ಲಿ ನಿಗಮದ ಅಧಿಕಾರಿಗಳ ತಂಡದಿಂದ ಪರಿಶೀಲಿಸಲಾಗಿ ಗ್ರಾಮೀಣ ವಸತಿ ಯೋಜನೆಗಳಡಿ 150 ಮನೆಗಳನ್ನು ನಿರ್ಮಿಸದೇ ಅವ್ಯವಹಾರ ಎಸಗಿರುವುದು ಕಂಡುಬಂದಿರುತ್ತದೆ. ಹಾಗೆಯೇ ಕಲಬುರಗಿ ಜಿಲ್ಲೆಯ ಕಲಬುರಗಿ ತಾಲ್ಲೂಕಿನ ಶ್ರೀನಿವಾಸ ಸರಡಗಿ ಗ್ರಾಮ ಪಂಚಾಯ್ತಿ ಹಾಗೂ ಯಾದಗಿರಿ ಜಿಲ್ಲೆಯ ಸೊರಪುರ ತಾಲ್ಲೂಕಿನ ಕೊಡ್ಮೆಕಲ ಗ್ರಾಮ ಪಂಚಾಯ್ತಿಗಳ ವ್ಯಾಪ್ತಿಯಲ್ಲಿ ಅವ್ಯವಹಾರಗಳು ನಡೆದಿರುವುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ. ಹಾಗೂ ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ಅವ್ಯವಹಾರ ನಡೆದಿರುವುದಾಗಿ ಜನ ಸಾಮಾನ್ಯರಿಂದ ಹಲವಾರು ದೂರಗಳು ನಿಗಮಕ್ಕೆ ಸಲ್ಲಿಕೆಯಾಗುತ್ತಿದ್ದು, ಸದರಿ ದೂರುಗಳಿಗೆ ಸಂಬಂಧಿಸಿದಂತೆ ದಿನಾಂಕ: 30.01.2019 ರ ಸರ್ಕಾರಿ ಆದೇಶದಂತೆ ಅಗತ್ಯ ಕ್ರಮ ಕೈಗೊಳ್ಳಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತಿ ಇವರಿಗೆ ಸೂಚನೆಗಳನ್ನು ನೀಡಲಾಗಿರುತ್ತದೆ.<br><br>ಸರ್ಕಾರವು ಅನುದಾನ ದುರ್ಬಳಕೆಯನ್ನು ತಡೆಯುವ ಉದ್ದೇಶದಿಂದ ದಿನಾಂಕ: 16.11.2019 ರ ಸರ್ಕಾರಿ ಆದೇಶದ ರೀತ್ಯಾ ಪ್ರಗತಿಯಲ್ಲಿರುವ ಹಾಗೂ ಅನುದಾನ ಬಿಡುಗಡೆಗೆ ಬೇಡಿಕೆ ಇರುವ ಮನೆಗಳನ್ನು Geo ಆಧಾರಿತ Vigil App ಮೂಲಕ ಪರಿಶೀಲಿಸಲು ಗ್ರಾಮೀಣ ಪ್ರದೇಶದಲ್ಲಿ ಜಿಲ್ಲಾಪಂಚಾಯತಿ ಮುಖ್ಯಕಾರ್ಯನಿರ್ವಹಣಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಹಾಗೂ ನಗರ ಪ್ರದೇಶದಲ್ಲಿ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಪರಿಶೀಲನಾ ಸಮಿತಿ ರಚಿಸಲಾಗಿರುತ್ತದೆ. |

| | | |
|---|---|---|
| ಉ) | ಪ್ರತಿಯೊಬ್ಬರಿಗೂ ಗೂಡನ್ನು ಒದಗಿಸುವಲ್ಲಿ ಸರ್ಕಾರವು ಕೈಗೊಳ್ಳುತ್ತಿರುವ ಕ್ರಮಗಳೇನು; ಕಾಲಮಿತಿ ಎಷ್ಟು; ಇದುವರೆವಿಗೂ ಎಷ್ಟು ಜನರಿಗೆ ಗೂಡನ್ನು ಒದಗಿಸುವಲ್ಲಿ ಸರ್ಕಾರವು ಸಫಲವಾಗಿದೆ? | ಪ್ರತಿಯೊಬ್ಬ ವಸತಿ ರಹಿತರಿಗೆ ವಸತಿ ಸೌಕರ್ಯ ಒದಗಿಸುವುದು ಸರ್ಕಾರದ ಆದ್ಯತೆಯಾಗಿರುತ್ತದೆ. ವಿವಿಧ ವಸತಿ ಯೋಜನೆಗಳಡಿ ಪ್ರತಿ ವರ್ಷ ಆಯವ್ಯಯದಲ್ಲಿ ಒದಗಿಸುವ ಅನುದಾನಕ್ಕೆ ಅನುಗುಣವಾಗಿ ಗುರಿ ನಿಗದಿಪಡಿಸಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br>ಇಲ್ಲಿಯವರೆಗೆ ಒಟ್ಟಾರೆ 42,37,591 ಫಲಾನುಭವಿಗಳು ಸದರಿ ಯೋಜನೆಗಳಡಿ ಲಾಭ ಪಡೆದುಕೊಂಡಿರುತ್ತಾರೆ. ಯೋಜನಾವಾರು ವಿವರ ಈ ಕೆಳಕಂಡಂತಿವೆ. |

| ಕ್ರ.ಸಂ. | ಯೋಜನೆಗಳು | ನಿರ್ಮಿಸಿದ ಮನೆಗಳು |
|---|---|---|
| 1 | ಬಸವ ವಸತಿ ಯೋಜನೆ | 26,05,251 |
| 2 | ದೇವರಾಜು ಅರಸು ವಸತಿ ಯೋಜನೆ | 41,634 |
| 3 | ಡಾ.ಬಿ.ಆರ್ ಅಂಬೇಡ್ಕರ್ ನಿವಾಸ್ ಯೋಜನೆ | 19,4433 |
| 4 | ಪ್ರಧಾನ ಮಂತ್ರಿ ಆವಾಸ್ ಯೋಜನೆ (ಗ್ರಾ) | 11,64,943 |
| 5 | ವಾಜಪೇಯಿ ನಗರ ವಸತಿ ಯೋಜನೆ | 2,31,330 |
| ಒಟ್ಟು | | **42,37,591** |

(ವಿ. ಸೋಮಣ್ಣ)
ವಸತಿ ಸಚಿವರು

ವ ಇ 121 ಹೆಚ್‌ಎಂ 2020